ಬಿಟ್ಟಲು. ಬಿಟ್ಟಲು ತುಂಬಾ ಸಂಪೂರ್ಣ ಉರಿದ ಸಿಗರೇಟಿನ ಚಿತಾಭಸ್ಮ, ಕೆಲವು ಅರ್ಧ ಮಾತ್ರವೇ ಉರಿದಿರುವಂಥವು. ಇನ್ನೂ ಕೆಲವು ಮುಕ್ಕಾಲು ಭಾಗ ಉರಿದು ಹೋಗಿವೆ. ಇಡೀ ಗಿಜಿಗಿಡುವ ಮಂಗಳೂರು ಪೇಟೆಯಲ್ಲಿ ಸಿಗರೇಟು ಸೇದಲು ಇದಕ್ಕಿಂತ ಅತ್ಯುತ್ತಮ ಸ್ಥಳ ಸಿಗಲಾರದು. ಅದೊಂದು ರುದ್ರ ಭೂಮಿಯಂಥಹ ಸ್ಥಳ. ಅಲ್ಲಿ ಸಿಗರೇಟಿನ ಯಾವ ಜಾತಿಗೂ ಮೇಲುಕೀಳೆಂಬ ಭೇದವಿಲ್ಲ. ಕಿಂಗ್, ಸ್ಮಾಲ್, ಬ್ರಿಸ್ಟಾಲ್ ವಗೈರೆಗಳು ಭಸ್ಮವಾಗುತ್ತಲೇ ಇರುತ್ತವೆ. ಅವುಗಳ ಉರಿದು ಉಳಿಸುವ ಭಸ್ಮಗಳು ಜೊತೆ ಜೊತೆಯಾಗಿಯೇ ಮಿಳಿತಗೊಳ್ಳುತ್ತವೆ. 'ತಂಬಾಕು ಕ್ಯಾನ್ಸರಿಗೆ ಕಾರಣ' ಎಂಬ ಬೋರ್ಡು ನೋಡಿದರೆ ಮಂಗಳೂರಿನ ಆಸ್ಪತ್ರೆಗಳು ನಡೆಯುವುದೇ ಇಂತಹ ಕೇಂದ್ರಗಳಿಂದ ಅನ್ನಬಹುದು. ಅಷ್ಟೂ ಜನರು ಸಮಯ ಸಂದರ್ಭಗಳಿಲ್ಲದೆ ಸ್ಪಾಂಜಿನಂತಹ ಶ್ವಾಸಕೋಶಗಳನ್ನು ಸುಡುತ್ತಲೇ ಇದ್ದಾರೆ.

ದೇವಪ್ಪನಿಗೆ ಸಿಗರೇಟಿನಿಂದೇನೂ ದೊಡ್ಡ ಲಾಭವಾಗುವುದಿಲ್ಲ. ಸಿಗರೇಟು ಸೇದಲು ಬರುವವರು ಸಿಗರೇಟಿನ ಜೊತೆಗೆ ಕುಡಿಯಲು ಜ್ಯೂಸೇನಾದರೂ ಕುಡಿದರೆ ಅದರಿಂದೇನಾದರೂ ಉಳಿಯುತ್ತದೆ, ಕೆಲವರು ಸಿಯಾಳ ಕುಡಿಯಲೂ ಬರುತ್ತಾರೆ.

'ಅವಳು ಹೋದ್ರೆ ಹೋಗ್ಲಿ ಮಾರಾಯ... ನೀನು ಸೇದು' ಅನ್ನುವ ಭಗ್ನ ಪ್ರೇಮಿಯೊಬ್ಬನನ್ನು ಹುರಿದುಂಬಿಸುವ ಮಾತುಕತೆ ಆ ಕೊಠಡಿಯೊಳಗಿನ ಹೊಗೆಯ ಮಧ್ಯೆ ನಡೆಯುತ್ತದೆ. ಮೊದಮೊದಲು ಕದ್ದು ಸೇದಲು ಬರುವ ತರುಣನೊಬ್ಬನ ಕೆಮ್ಮು, ಡಾನ್ ಬಾಸ್ಕೋ ಹಾಲ್‌ಗೆ ನಾಟಕಕ್ಕಾಗಿ ಬಂದ ನಟನ ನಿಟ್ಟುಸಿರ ಹೊಗೆ, ಕೆಲಸದೊತ್ತಡವನ್ನು ಮೂಗು- ಬಾಯಿಯಲ್ಲಿ ನಿರಾಳಗೊಳಿಸುವ ಐಟಿ-ಬಿಟಿ ಉದ್ಯೋಗಿಗಳು, ಮಹಿಳಾ ಸಬಲೀಕರಣದ ಹೊಗೆ ಮಿಶ್ರಿತ ಮಾತುಗಳು, ಇನ್ನೂ ಮುಂದುವರಿದು ಎಲ್ಲರೆದುರಲ್ಲಿ ಸಿಗರೇಟು ಸೇದಲು ಸಾಧ್ಯವಾಗದೆ ಚಡಪಡಿಸುವ ಹೆಣ್ಣು ಮಕ್ಕಳ ಖಾಸಗಿತನ, ಆ ಕೊಠಡಿಯಲ್ಲಿ ಏನುಂಟು ಏನಿಲ್ಲ. ಅಲ್ಲಿ ಸಿಗರೇಟು ಸೇದಿದವರಲ್ಲಿ ಕೆಲವರು ರಾಜಕಾರಣಿಗಳಾಗಿದ್ದಾರೆ, ಪೊಲೀಸ್ ಅಧಿಕಾರಿಗಳಾಗಿದ್ದಾರೆ, ನ್ಯಾಶನಲ್ ಕ್ರೀಡಾಪಟುಗಳಾಗಿದ್ದಾರೆ.

ದೇವಪ್ಪ ಆ ಕೊಠಡಿಯ ಗೋಡೆ- ಕಿಟಕಿಗಳಂತೆ ಆ ಮಾತುಗಳನ್ನೆಲ್ಲಾ ಕೇಳಿಸಿಕೊಳ್ಳುತ್ತಾನೆ. ಮೊದಮೊದಲು ಇಲ್ಲಿಗೇ ಬಂದು ಕದ್ದು ಮುಚ್ಚಿ ಸೇದುತ್ತಿದ್ದ ಹುಡುಗರೆಲ್ಲಾ ಬೆಳೆದು ಈಗ ವಿವಾಹಿತರಾಗಿಯೂ ಸಿಗರೇಟಿನ ದಾಸರಾಗಿ ಬಿಟ್ಟಿರುವುದನ್ನು ಅವನು ಗುರುತಿಸುತ್ತಾನೆ. ಸಿಗರೇಟಿನ ಬೂದಿಯಲ್ಲಿ ವ್ಯಾಪಾರದ ಬಗೆಗಿನ ಮಾತುಗಳಿರುತ್ತವೆ, ಪ್ರಾದೇಶಿಕ ರಾಜಕೀಯದ ಬಗ್ಗೆ, ಸದ್ಯದ ಪರಿಸ್ಥಿತಿಯ ಬಗ್ಗೆ, ಮಾರುಕಟ್ಟೆಯ ಏರಿಳಿತದ ಬಗ್ಗೆ, ಸೋತ ಪ್ರೀತಿಯ ಬಗ್ಗೆ, ಹೊಸ ನಾಟಕದ ಬಗ್ಗೆ, ಬರಹಗಳ ಬಗ್ಗೆ, ಕಥೆ- ಕವಿತೆಗಳ ಬಗ್ಗೆ, ಸಾಹಿತ್ಯ ವಿಮರ್ಶೆಗಳ ಬಗ್ಗೆ, ಮಹಿಳಾ ಸ್ವಾತಂತ್ರ್ಯದ ಬಗ್ಗೆ, ಧರ್ಮ-ಜಾತಿಗಳ ಬಗ್ಗೆ, ಕೌಟುಂಬಿಕ ಜಗಳದ ಬಗ್ಗೆ, ದಾಯಾದಿ ಕಲಹದ ಬಗ್ಗೆ, ಹೀಗೆ ಜಗದ ಎಲ್ಲಾ ಮಜಲುಗಳ ಬಗ್ಗೆ ಆ ಹೊಗೆಯ ಕೊಠಡಿಗೆ ಕೇಳಿ ಗೊತ್ತಿದೆ. ಇಷ್ಟೆಲ್ಲಾ ಲೋಕ ಜ್ಞಾನ ಸಾಕಾಗದಿರುವುದಕ್ಕೆ ದೇವಪ್ಪ ರೇಡಿಯೋ ಇರಿಸಿ ದಿನಕ್ಕೆರೆಡು ವಾರ್ತೆಗಳನ್ನು ಕೇಳುತ್ತಿರುತ್ತಾನೆ. ವಾರ್ತೆಗಳು ಮುಗಿದರೆ ಸ್ವಲ್ಪ ಹೊತ್ತು ಪ್ರಸಾರವಾಗುವ ಚಿತ್ರಗೀತೆಗಳನ್ನು ಕೇಳಿಸಿಕೊಳ್ಳುತ್ತಾನೆ. ಆ ಮಧ್ಯೆ ಗಿರಾಕಿಗಳು ಬಂದರೆ ರೇಡಿಯೋವನ್ನು ಖೈದು ಮಾಡದೆ ಅವರೂ ಕೇಳಿಸಿಕೊಳ್ಳಲಿಯೆಂಬ ಉದ್ದೇಶದಿಂದಲೋ ಏನೋ, ಚಲಾವಣೆಯಲ್ಲಿಡುತ್ತಾನೆ. ಅದು ಹಿಮ್ಮೇಳದಂತೆ ಜರುಗುತ್ತಿದ್ದರೂ ಆ ಒಳ ಕೊಠಡಿಯಲ್ಲಿ ನಿರ್ಭಿಡೆಯಿಂದ ಸಿಗರೇಟುಗಳ ಶವ ಕರಕಲಾಗುತ್ತಲೇ ಇರುತ್ತವೆ.

ನೋಡನೋಡುತ್ತಿದ್ದಂತೆ ಏನಾಶ್ಚರ್ಯ, ಜನ್ನತ್ ಕನಸೋ, ನನಸೋ ಎನಿಸಿಕೊಳ್ಳುವ ಹೊತ್ತಿಗೆ ಆ ಮಟಮಟ ಮಧ್ಯಾಹ್ನದ ಹೊತ್ತಿಗೆ ಅವಳು ಬರುತ್ತಿದ್ದಾಳೆ. ಅದೇ ಮಾಸಲಾದ ಕಪ್ಪು ಬುರ್ಖಾ, ಗುಳಿ ಬಿದ್ದ ಕಣ್ಣುಗಳು. ಸಿಗರೇಟು ಕೊಠಡಿಯೊಳಗೆ ಜನ್ನತನ್ನೂ ಸೇರಿ ಹತ್ತಾರು ಗಂಡು ಜೀವಗಳು ಸಿಗರೇಟು ಸೇದುತ್ತಿವೆ. ಅವಳು ಒಳನುಗ್ಗುತ್ತಾಳೆ. ಅವಳ ಕಪ್ಪಗಿನ ಆ ವಸ್ತ್ರ ಮತ್ತು ಸುತ್ತಲಿನ ಕತ್ತಲು ಅವಳ ಮುಖವನ್ನು ಗುರ್ತಿಸಲಾಗದಿದ್ದರೂ ಆ ಆಕೃತಿಯನ್ನು ಎಲ್ಲರೂ ಅರಿತಿದ್ದಾರೆ. ಕೊಠಡಿಯ ಮಧ್ಯದಲ್ಲೇ ಇರಿಸಿದ ಖುರ್ಚಿಯಲ್ಲಿ ಅವಳು ಕುಳಿತುಕೊಳ್ಳುತ್ತಾಳೆ. ಎಲ್ಲರ ಕಣ್ಣುಗಳು ಎವೆಮುಚ್ಚದೆ ಅವಾಕ್ಕಾಗಿ ಅವಳನ್ನೇ ದಿಟ್ಟಿಸುತ್ತಿವೆ. ಮಧ್ಯೆಯಿಟ್ಟ